# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 504
2. ಸದಸ್ಯರ ಹೆಸರು : ಶ್ರೀ. ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 22.12.2022
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದ ಆರ್ಥಿಕ ಸ್ಥಿತಿಗತಿಗಳ ಪ್ರಗತಿಯೇನು; (ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದ ಆರ್ಥಿಕ ಸ್ಥಿತಿಗತಿಗಳ ಪ್ರಗತಿಯನ್ನು ಮಹಾಲೇಖಪಾಲರ ಲೆಕ್ಕದನ್ವಯ Glance ನಲ್ಲಿ ಪ್ರಕಟಿಸಲಾಗುವುದು. ಪ್ರಸ್ತುತ ಪ್ರಕಟಿಸಲಾದ ಅಕ್ಟೋಬರ್ -2022ರ ಪ್ರತಿಯನ್ನು ಹಾಗೂ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| ಆ | ರಾಜ್ಯ ಸರ್ಕಾರವು ಕಳೆದ ಮೂರೂವರೆ ವರ್ಷದಲ್ಲಿ ಒಟ್ಟು ಎಷ್ಟು ಸಾಲವನ್ನು ಪಡೆದುಕೊಂಡಿವೆ ಮತ್ತು ಈ ಸಾಲವನ್ನು ಯಾವ ಯಾವ ಮೂಲಗಳಿಂದ ಪಡೆಯಲಾಗಿದೆ; ರಾಜಿಯವು ಪಡೆದಿರುವ ಸಾಲಕ್ಕೆ ಮಾಸಿಕ ಎಷ್ಟು ಬಡ್ಡಿಯನ್ನು ಪಾವತಿಸುತ್ತಿದೆ; ಒಟ್ಟಾರೆಯಾಗಿ ರಾಜ್ಯದ ಒಟ್ಟು ಸಾಲವೆಷ್ಟು; | ಮಹಾಲೇಖಪಾಲರ ಮಾರ್ಚ್ 2022ರ ಅಂತ್ಯದವರೆಗಿನ ಲೆಕ್ಕದ ಮಾಹಿತಿಯನುಸಾರ ರಾಜ್ಯದ ಈವರೆಗಿನ ಬಾಕಿ ಸಾರ್ವಜನಿಕ ಸಾಲದ ಮೊತ್ತ ರೂ. 374426.82 ಕೋಟಿಗಳು.<br>ಕಳೆದ ನಾಲ್ಕು ವರ್ಷಗಳಿಂದ ವರ್ಷವಾರು ಮಾಡಲಾದ ಸಾಲದ ವಿವರ (ರೂ. ಕೋಟಿಗಳಲ್ಲಿ) |

| ವಿವರ | 2018-19 ಲೆಕ್ಕ | 2019-20 ಲೆಕ್ಕ | 2020-21 ಲೆಕ್ಕ | 2021-22 ಲೆಕ್ಕ |
|---|---|---|---|---|
| ಒಟ್ಟು ಸಾರ್ವಜನಿಕ ಸಾಲದ ಸ್ವೀಕೃತಿ | 41914.06 | 50459.01 | 84527.95 | 80640.81 |
| -ಇದರಲ್ಲಿ | | | | |
| ಆಂತರಿಕ ಸಾಲ (ಮುಕ್ತ ಮಾರುಕಟ್ಟೆ ನಬಾರ್ಡ್ ಸಾಲ) | 40469.67 | 49783.75 | 70413.87 | 60461.43 |
| ಭಾರತ ಸರ್ಕಾರದ ಸಾಲ | 1444.39 | 675.26 | 14114.04 | 20179.38 |

| | | |
|---|---|---|
| ಇ | ಬೆಂಗಳೂರು ಮಹಾನಗರದ ಜನತೆಯು ಕುಡಿಯುವ ನೀರು, ಸಂಚಾರ ದಟ್ಟಣೆ, ಜನಸಂಖ್ಯೆ, ವಾಯು ಮಾಲಿನ್ಯ ಮತ್ತು ಘನ ತ್ಯಾಜ್ಯ ನಿರ್ವಹಣೆ ಮುಂತಾದ ಪ್ರಮುಖ ಸಮಸ್ಯೆಗಳಿಂದ ಸಂಕಷ್ಟಕ್ಕೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | • ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಳೆದ 05 ವರ್ಷಗಳಲ್ಲಿ 873 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲಾಗಿದ್ದು, ಸಾರ್ವಜನಿಕರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಿ ಹಾಗೂ 08 ವಲಯಗಳ ವ್ಯಾಪ್ತಿಯಲ್ಲಿ ಕೊಳವೆ ಬಾವಿ ಮುಖಾಂತರ ಸಾರ್ವಜನಿಕರಿಗೆ ನೀರನ್ನು ಒದಗಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಬಿ.ಡಬ್ಲ್ಯೂ.ಎಸ್.ಎಸ್.ಬಿ. ವ್ಯವಸ್ಥೆ ಅಲ್ಲದೆ ಬೆಂಗಳೂರು ಮಹಾನಗರ ಪಾಲಿಕೆಯು ಸಾರ್ವಜನಿಕರಿಗೆ ನೀರನ್ನು ಒದಗಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಕಳೆದ ಎರಡು ವರ್ಷಗಳಿಂದ ಯಥೇಚ್ಛವಾಗಿ ಮಳೆ ಬರುತ್ತಿರುವುದರಿಂದ ನೀರಿನ ಮಟ್ಟವು ಗಣನೀಯವಾಗಿ ಹೆಚ್ಚಳವಾಗಿದ್ದು, ನೀರಿನ ಸಮಸ್ಯೆಯನ್ನು ಸರ್ವತೋಮುಖವಾಗಿ ಬಗೆಹರಿಸಲು ಕ್ರಮವಹಿಸಲಾಗಿದೆ.<br>• ಸಂಚಾರ ದಟ್ಟಣೆಗೆ ಸಂಬಂಧಿಸಿದಂತೆ, ಸರ್ಕಾರದ ಮಟ್ಟದಲ್ಲಿ ಮಾನ್ಯ ಮುಖ್ಯ ಕಾರ್ಯದರ್ಶಿ ರವರ ಅಧ್ಯಕ್ಷತೆಯಲ್ಲಿ "Inter Department Coordination Committee" ಒಂದು ಸಮಿತಿಯು ರಚಿತವಾಗಿದ್ದು, ಮುಖ್ಯವಾಗಿ ಬಿಬಿಎಂಪಿ ಮತ್ತು ಬೆಂಗಳೂರು ಸಂಚಾರಿ ಪೊಲೀಸ್ ಇಲಾಖೆ ಹಾಗೂ ಇತರೆ ಇಲಾಖೆಗಳ ಜೊತೆ ಸಮನ್ವಯ ಸಾಧಿಸಿ 4 ಗರಿಷ್ಠ ಪ್ರಮಾಣದ ಸಂಚಾರಿ ದಟ್ಟಣೆ ಇರುವ ಹೆಬ್ಬಾಳ, ಗೊರಗುಂಟೆಪಾಳ್ಯ, ಸಿಲ್ಕ್ ಬೋರ್ಡ್, ಕೆ.ಆರ್. ಪುರಂ, ಗಳಲ್ಲಿ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. ಎರಡನೇ ಹಂತದಲ್ಲಿ 05 ಜಂಕ್ಷನ್‌ಗಳಲ್ಲಿ ಅಲ್ಪ ಪ್ರಮಾಣದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ. ಬಿಬಿಎಂಪಿ ವತಿಯಿಂದ ಸಂಚಾರಿ ದಟ್ಟಣೆಯನ್ನು ಸುಧಾರಿಸಲು ಹಾಗೂ ಪಾದಚಾರಿ ಮಾರ್ಗ ಅಭಿವೃದ್ಧಿ, ರಸ್ತೆಗಳಿಗೆ ಲೈನ್ ಮಾರ್ಕಿಂಗ್ ಮಾಡುವುದು, ಸ್ಪಡ್‌ಗಳನ್ನು ಅಳವಡಿಸುವುದು ಹಾಗೂ ಇತರೆ ಕಾಮಗಾರಿಗಳನ್ನು ನಿರ್ವಹಿಸಲು ಪ್ರತ್ಯೇಕವಾಗಿ ಒಂದು ಸಂಚಾರಿ ಇಂಜಿನಿಯರಿಂಗ್ ವಿಭಾಗವನ್ನು ಕಾರ್ಯಪಾಲಕ ಅಭಿಯಂತರರ ರವರ ಮೇಲುಸ್ತುವಾರಿಯ ಅಡಿಯಲ್ಲಿ ಸ್ಥಾಪಿಸಲಾಗಿರುತ್ತದೆ.<br>• ಘನ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಪಾಲಿಕೆಯ ವತಿಯಿಂದ ಹಲವಾರು ಕ್ರಮಗಳನ್ನು ಕೈಗೊಂಡಿದ್ದು, ವಿವರಗಳು ಈ ಕೆಳಕಂಡಂತಿವೆ:<br>1. ಮೂಲದಲ್ಲಿಯೇ ಶೇ.50 ರಷ್ಟು ಹಸಿಕಸ ಹಾಗೂ ಒಣಕಸ |



Generated from eOffice by G JAGADEESHA, CMO-JS(GJ), JOINT SECREATRY, CMO on 22/12/2022 11:38 AM

ವಿಂಗಡಣೆ ಮಾಡಲು ಕ್ರಮಕೈಗೊಳ್ಳಲಾಗಿರುತ್ತದೆ.

2. ಹಸಿಕಸವನ್ನು ಸಂಸ್ಕರಿಸಲು ಎಂಟು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲಾಗಿದೆ.
3. ಬಿ.ಬಿ.ಎಂ.ಪಿ. ವ್ಯಾಪ್ತಿಯ ವಾರ್ಡ್‌ಗಳಲ್ಲಿ ಒಟ್ಟು ಸುಮಾರು 125 ಸ್ಥಳಗಳಲ್ಲಿ ಒಣಕಸ ಸಂಗ್ರಹಣಾ ಘಟಕಗಳನ್ನು ಸ್ಥಾಪಿಸಲಾಗಿದೆ.
4. 13 ಸ್ಥಳಗಳಲ್ಲಿ ಬಯೋಮೆಥನೈಸೇಶನ್ ಘಟಕಗಳನ್ನು ಸ್ಥಾಪಿಸಲಾಗಿರುತ್ತದೆ.
5. ಟ್ರಾನ್ಸ್‌ಫರ್ ಸ್ಟೇಷನ್ ಗಳನ್ನು ಸ್ಥಾಪಿಸಲಾಗಿರುತ್ತದೆ.
6. ಲೆಗಸಿ ವೇಸ್ಟ್ ನ್ನು ಬಯೋಮೈನಿಂಗ್ ಮಾಡುವ ಕಾಮಗಾರಿ ಪ್ರಗತಿಯಲ್ಲಿರುತ್ತದೆ.
7. ಲೆಗಸಿ ವೇಸ್ಟ್ ನ್ನು ಬಯೋರೆಮಿಡಿಯೇಶನ್ ಮಾಡುವ ಕಾಮಗಾರಿ ಪ್ರಗತಿಯಲ್ಲಿರುತ್ತದೆ.
8. ಬ್ಲಾಕ್ ಸ್ಪಾಟ್ ನಿರ್ಮೂಲನೆಗಾಗಿ ಕ್ರಮಕೈಗೊಳ್ಳಲಾಗಿರುತ್ತದೆ.
9. ಘನತ್ಯಾಜ್ಯ ವಿಲೇವಾರಿಯನ್ನು ಸಮರ್ಪಕವಾಗಿ ನಿರ್ವಹಿಸಲು ಪ್ರತ್ಯೇಕವಾಗಿ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ ಕಂಪನಿಯನ್ನು ಸ್ಥಾಪಿಸಲಾಗಿರುತ್ತದೆ.
10. ರಸ್ತೆಬದಿ ದೂಳನ್ನು ಸ್ವಚ್ಛಗೊಳಿಸಲು 27 ಸ್ವೀಪಿಂಗ್ ಮೆಷಿನ್ ಗಳನ್ನು ಖರೀದಿ ಮಾಡಲಾಗಿದೆ.
11. ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲಾಗಿರುತ್ತದೆ.
12. ವೈಜ್ಞಾನಿಕ ಭೂಭರ್ತಿ ಘಟಕ ಸ್ಥಾಪಿಸಲಾಗಿದೆ.

ಸಂಖ್ಯೆ: ಆಇ 78 ಎಫ್‌ಆರ್‌ಸಿ 2022

(ಬಸವರಾಜ ಎಸ್ ಬೊಮ್ಮಾಯಿ)
ಮುಖ್ಯಮಂತ್ರಿ



...Office by R JAGADEESHA, CMO-JS(GJ), JOINT SECREATRY, CMO on 22/12/2022 11:39 AM